ಪ್ರಶ್ನೆ

ಅ) ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿ ಖಾಸಗಿ ಬಸ್ ನಿಲ್ದಾಣ ಹಾಗೂ ವಾಹನ ರಿಪೇರಿ ಅಂಗಡಿಗಳು ಮತ್ತು ಟ್ರಕ್ ಟರ್ಮಿನಲ್ ನಿರ್ಮಿಸಲು ನಗರಸಭೆಯಿಂದ ಸ್ಥಳವನ್ನು ಗುರುತಿಸಿ ಒಂದು ಪ್ರೋಜೆಕ್ಟ್ ರಿಪೋರ್ಟ್ ತಯಾರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಇದರ ಅಂದಾಜು ಮೊತ್ತವೆಷ್ಟು?

ಆ) ಈ ಪ್ರೋಜೆಕ್ಟ್ ರಿಪೋರ್ಟ್ ಸುಮಾರು 6 ವರ್ಷಗಳ ಹಿಂದೆ ತಯಾರು ಮಾಡಿದ್ದು, ಹುಡ್ಕೋ ನೆರವು ಪಡೆಯುವಲ್ಲಿ ವಿಳಂಬವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದನ್ನು ಅತಿ ಶೀಘ್ರವಾಗಿ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಉತ್ತರ

ಅ) ಹೌದು 1994ರಲ್ಲಿ ರೂ 396 00 ಲಕ್ಷದ ಪ್ರಾಜೆಕ್ಟ್ ರಿಪೋರ್ಟ್ ಮಾಡಲಾಗಿದೆ

ಆ) ಹೌದು, ಆದಾಗ್ಯೂ ದಿನಾಂಕ 30-1-99ರಂದು ವಿಷಯ ಸಂಖ್ಯೆ 6ರಲ್ಲಿ ತಂಗುದಾಣ ಹಾಗೂ ಶೌಚಾಲಯ ನಿರ್ಮಿಸಲು ಕೌನ್ಸಿಲ್‌ನಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ

ಇ) ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗುವುದು

ಗುಂಡ್ಲುಪೇಟೆ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 126(608)

ಸದಸ್ಯರ ಹೆಸರು ಶ್ರೀ ಹೆಚ್ ಎಸ್ ಮಹದೇವ ಪ್ರಸಾದ್(ಗುಂಡ್ಲುಪೇಟೆ)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯ ಮಂತ್ರಿಯವರು)

ಪ್ರಶ್ನೆ

1 ಗುಂಡ್ಲುಪೇಟೆ ಪಟ್ಟಣಕ್ಕೆ ಕರ್ನಾಟಕನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ವತಿಯಿಂದ ಕಬಿನಿ ನದಿಯಿಂದ ಕುಡಿಯುವ ನೀರಿನ ಯೋಜನೆಯ ಮಾರ್ಗ

ಮಧ್ಯದಲ್ಲಿ ಬರುವ 40 ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಕ್ರಮ ಕೈಗೊಳ್ಳಲಾಗಿದೆಯೇ?

2 ಕೈಗೊಂಡಿದ್ದರೆ ಈವರೆವಿಗೆ ಮಾಡಲಾಗಿರುವ ಕ್ರಮಗಳೇನು?

ಉತ್ತರ

1 ಹೌದು, ಗುಂಡ್ಲುಪೇಟೆ ಮತ್ತು ಮಾರ್ಗ ಮಧ್ಯದಲ್ಲಿ ಬರುವ 40 ಗ್ರಾಮಗಳಿಗೆ ಕಬಿನಿ ನದಿಯಿಂದ ಕುಡಿಯುವ ನೀರು ಒದಗಿಸುವ ಪ್ರಾದೇಶಿಕ ನೀರು ಸರಬರಾಜು ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ

2 ಈ ಕಾಮಗಾರಿಯ ಮೂಲ ಸ್ಥಾವರ ಜಲ ಶುದ್ಧೀಕರಣಾಗಾರ ಮಧ್ಯಂತರ ನೀರೆತ್ತುವ ಸ್ಥಾವರ ಮತ್ತು 2 ಸಂಖ್ಯೆಯ 10 ಲಕ್ಷ ಲೀಟರ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್ ಕೆಲಸಗಳು ಮುಗಿದಿರುತ್ತದೆ ಮೂಲ ಸ್ಥಾವರದಿಂದ ಗುಂಡ್ಲುಪೇಟೆ ವಟ್ಟಣದವರೆಗೆ 500 ಮಿ ಮಿ ವ್ಯಾಸದ 33,850 ಮೀ ಉದ್ದದ ಪಿ ಎಸ್ ಸಿ ಏರು ಕೊಳವೆ ಮಾರ್ಗದ ಕಾಮಗಾರಿಯಲ್ಲಿ ಈಗಾಗಲೇ 33,645 ಮೀ ಕೊಳವೆಗಳು ಸರಬರಾಜಾಗಿದ್ದು 29 715 ಮೀ ಕೊಳವೆಗಳನ್ನು ಅಳವಡಿಸಲಾಗಿದೆ ಅಲ್ಲದೆ 500 ಮೀ ಮೀ ವ್ಯಾಸದ 6,341ಮೀ ಉದ್ದದ ಎಂ ಎಸ್ ಕೊಳವೆ ಮಾರ್ಗದ ಕಾಮಗಾರಿಯು ಮುಗಿದಿರುತ್ತದೆ ಉಳಿಕೆ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಮೂಲ ಸ್ಥಾವರ ಜಲಶುದ್ಧೀಕರಣಾಗಾರ ಮತ್ತು ಮಧ್ಯಂತರ ಪಂಪು ಮನೆಯ ಪಂಪ್‌ಸೆಟ್‌ಗಳು ಸರಬರಾಜಾಗಿದ್ದು ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ ಈ ಯೋಜನೆಯನ್ನು ಮಾರ್ಚಿ 2002ರಲ್ಲಿ ಚಾಲನೆಗೊಳಿಸಲು ಯೋಜಿಸಲಾಗಿದೆ

ಅಡಿಕೆ ವಹಿವಾಟಿನಲ್ಲಿ ಸಂಗ್ರಹಿಸಲಾದ ವಾಣಿಜ್ಯ ತೆರಿಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 127(99)

ಸದಸ್ಯರ ಹೆಸರು ಶ್ರೀ ಸದಾನಂದ ಗೌಡ ಡಿ ವಿ (ಪುತ್ತೂರು)

ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ (ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ) ಕಳೆದ 3 ವರ್ಷಗಳಲ್ಲಿ ಕರ್ನಾಟಕ ವಾಣಿಜ್ಯ ತೆರಿಗೆ ಕಾಯ್ದೆಯ ಅಡಿಯಲ್ಲಿ ಅಡಿಕೆ